ಎಂದು ಅನಿರುದ್ಧನಿಗನ್ನಿಸಿತು. ಹೀಗಾಗಿ ಒಂದು ಕರೆಯನ್ನು ಸ್ವೀಕರಿಸಿ ಎಲ್ಲವನ್ನೂ ಚರ್ಚಿಸುವುದು ಒಳ್ಳೆಯದೆನ್ನಿಸಿತು. ಇಬ್ಬರೂ ಫೋನ್ ಕರೆಗೆ ಒಂದು ಸಮಯವನ್ನು ನಿಕ್ಕಿ ಮಾಡಿಕೊಂಡರು. ವಾಟ್ಸ್ಆ್ಯಪ್ ಕಾಲ್ ಮಾಡೋಣ – ಖರ್ಚೂ ಕಡಿಮೆ, ಸೆಕ್ಯೂರಾಗೂ ಇರುತ್ತೆ ಎನ್ನುವ ಮಾತನ್ನು ಅಖ್ತರ ಹೇಳಿದ. ಆ ಮಾತನ್ನು ಇಬ್ಬರೂ ಒಪ್ಪಿದರು. ಆದರೆ ಖರ್ಚು ಕಡಿಮೆಯೆನ್ನುವ ಮಾತು ಸರಿ, ಸೆಕ್ಯೂರಾಗೂ ಇರುತ್ತೆ ಅಂತ ಅಖ್ತರ ಯಾಕೆ ಹೇಳಿದ ಎನ್ನುವ ಪ್ರಶ್ನೆ ಅನಿರುದ್ಧನನ್ನು ಕುಟುಕಿತು.

★★★

ಅಖ್ತರ ಅನಿರುದ್ಧನಿಗೆ ಕರೆ ಮಾಡಿ ಮಾತಾಡಿದಾಗ, ಸಹಜವಾಗಿಯೇ ಅವರ ಕಾಲೇಜಿನ ಗೆಳೆತನ, ಹಳೆಯ ನೆನಪುಗಳು ಮತ್ತು ಸಹಜ ಸ್ನೇಹದ ಭಾವನೆಗಳು ಉಕ್ಕಿ ಬಂದವು. ಎರಡು ವರ್ಷಗಳ ಕೆಳಗಿನ ತಮ್ಮ ಪುನರ್ಮಿಲನ ಕಾರ್ಯಕ್ರಮವಾದಾಗ ಈ ಗೆಳೆತನಕ್ಕೆ ಒಂದು ಹೊಸ ಅರ್ಥ ಮತ್ತು ಆಯಾಮ ಬಂದಿತ್ತು. ತಮ್ಮ ಹಳೆಯ ಸಹಪಾಠಿ ಸುಜಾತಾಳನ್ನು ಅವರು ಹೊಸದಾಗಿ – ಹೊಸ ದೃಷ್ಟಿಯಿಂದ, ಮತ್ತು ಒಂದು ರೀತಿಯ ಹೆಮ್ಮೆಯಿಂದ ನೋಡಿದ್ದರು. ಮೊದಲಿಗೆ ಪ್ರಪಂಚ ಜ್ಞಾನವೇ ಇಲ್ಲದೇ ದೇವಸ್ಥಾನ ಮತ್ತು ಪುಸ್ತಕಗಳ ನಡುವೆಯಿದ್ದ ಸುಜಾತಾ ಮದುವೆಯ ನಂತರ ಮುಂಬಯಿಗೆ ಹೋಗಿ ಮುಕುಂದಸಾಗರನ ವ್ಯಾಪಾರದಲ್ಲಿ ತನ್ನನ್ನು ತೊಡಗಿಸಿಕೊಂಡು ಅರಳಿದ ರೀತಿ ಮತ್ತು ಅವಳ ಪ್ರಬುದ್ಧತೆಯನ್ನು ಕಂಡು ಇಬ್ಬರೂ ಪ್ರಭಾವಿತರಾಗಿದ್ದರು. ಹೀಗೆ ಮಾತುಕತೆಯಲ್ಲಿ ಅನಿರುದ್ಧ ಸುಜಾತಾಳನ್ನು ಕಾಣಲು ಕೈಗೊಂಡಿದ್ದ ಯಾತ್ರೆ ಮತ್ತು ಅವರ ನಡುವೆ ಆಗುತ್ತಿದ್ದ ದಿನನಿತ್ಯದ ಮಾತುಕತೆಯ ವಿವರಗಳನ್ನು ಹೇಳಿದ. ಮುಕುಂದಸಾಗರ ತನ್ನ ಸ್ವಾಮ್ಯದ ಪಾಲನ್ನು ಮಾರಿದ್ದರಿಂದ ಅದನ್ನು ಕೊಂಡುಕೊಂಡಿದ್ದ ಶಿವಾನಿ, ಅವಳ ತಂದೆ, ಮತ್ತು ಶಿವಾನಿಯ ಸಹಪಾಠಿ ಮತ್ತು ಗೆಳೆಯ ಚಿನ್ಮಯ್ ಇವರ ಕೈಲಿ ಅವರ ವ್ಯಾಪಾರದ ಬಹುಪಾಲು ಸ್ವಾಮ್ಯ, ನಿರ್ವಹಣೆ ಮತ್ತು ಉಸ್ತುವಾರಿ ಎರಡೂ ಇತ್ತು. ಸುಜಾತಾಳನ್ನು ವ್ಯಾಪಾರದಿಂದಲೂ, ಅವರಿದ್ದ ಪೆಂಟ್ ಹೌಸಿನಿಂದಲೂ ಹೊರಹಾಕಿರುವ ಸುದ್ದಿಯನ್ನು ಅನಿರುದ್ಧ ತಿಳಿಸಿದ. ಈ ಪ್ರಕ್ರಿಯೆಯ ಮಾನವೀಯತೆಯ ಬಗ್ಗೆ ಅವರು ಒಂದಿಷ್ಟು ಮಾತನಾಡಿದರು.

ಅಖ್ತರನಿಗೆ ಬೇಕಿದ್ದರೆ ಅನಿರುದ್ಧ ಅನೇಕ ವಿವರಗಳನ್ನು ತಿಳಿಸಬಹುದಿತ್ತು. ಆದರೆ ಸಂದರ್ಭಕ್ಕೆ ವಿವರಗಳು ಮುಖ್ಯವಾಗಿರಲಿಲ್ಲ. ಸುಜಾತಾ ಈಗಿದ್ದ ಪರಿಸ್ಥಿತಿಯಲ್ಲಿ ಅವಳೆದುರು ಎರಡು ಆಯ್ಕೆಗಳಿದ್ದವು – ಒಂದು ಎಲ್ಲವನ್ನೂ ಬಿಟ್ಟು, ವ್ಯಾಪಾರದಿಂದ ಬರಬಹುದಾದಷ್ಟು ಹಣವನ್ನು ತೆಗೆದು ಬೆಂಗಳೂರು – ಮೈಸೂರುಗಳಿಗೆ ವಾಪಸ್ಸಾಗಿ ಶಾಂತವಾದ – ಅರೆ ನಿವೃತ್ತ ಜೀವನವನ್ನು ಸಾಗಿಸುವುದು. ಎರಡು – ತಮ್ಮ ವ್ಯಾಪಾರ, ತನ್ನ ಹೆಸರಿನ ಘನತೆಗಾಗಿ ಹೋರಾಡಿ ವ್ಯಾಪಾರವನ್ನು ಮತ್ತೆ ತನ್ನ ಕೈವಶ ಮಾಡಿಕೊಳ್ಳುವುದು. ಈ ಎರಡರ ಬಗ್ಗೆ ಅವಳು ಅನಿರುದ್ಧನೊಂದಿಗೆ ಹಲವು ಬಾರಿ ಚರ್ಚಿಸಿದ್ದನ್ನು ಅವನು ಹೇಳಿದ್ದ. ಆದರೆ ಈ ಆಯ್ಕೆಯನ್ನು ಅವಳೇ ಮಾಡಬೇಕಿತ್ತು. ಅವಳ ಪರವಾಗಿ ಯಾರೂ ಈ ವಿಷಯದ ಬಗ್ಗೆ ಒಂದು ತೀರ್ಮಾನಕ್ಕೆ ಬರುವುದು ಸಾಧ್ಯವೇ ಇರಲಿಲ್ಲ. ಇದು ಒಂದು ಜಟಿಲ ವಿಷಯವಾಗಿ ತಯಾರಾಗಿತ್ತು. ಅಖ್ತರನಿಗೆ ಈ ವಿಷಯದ ಬಗ್ಗೆ ಹೆಚ್ಚಿನ ಮಾಹಿತಿ ಸಿಗಬಹುದಾದ ಕೆಲವು ಜಾಲತಾಣಗಳ ಕೊಂಡಿಗಳನ್ನೂ, ಮತ್ತು ಸುಜಾತಾ ಮತ್ತು ಅನಿರುದ್ಧರ ನಡುವೆ ಆಗಿದ್ದ ಮಿಂಚಂಚೆಯ ಪತ್ರವ್ಯವಹಾರವನ್ನೂ ಅನಿರುದ್ಧ ಅಖ್ತರನಿಗೆ ಫಾರ್ವರ್ಡ್ ಮಾಡಿದ.

ಆದರೆ ಈ ಮಾತುಕತೆಯ ನಡುವೆ ಸಾಮಾಜಿಕ ಜಾಲತಾಣಗಳಲ್ಲಿ ಅಖ್ತರನ ಅಸ್ತಿತ್ವವೇ ಮಾಯವಾಗಿರುವ ಮಾತನ್ನು ಅನಿರುದ್ಧ ಎತ್ತಿದ. "ಹೋದ ಬಾರಿ ನಾನು ಇಂಡಿಯಾಕ್ಕೆ ಬಂದಿದ್ದಾಗ ನಡೆದ ವಿಚಾರಣೆ ಮತ್ತು ಅದರ ಸುತ್ತಮುತ್ತಲಿನ ಘಟನೆಗಳು ನಿನಗೆ ಗೊತ್ತೇ ಇದೆ. ಸುಮ್ಮನೆ ಅನಾವಶ್ಯಕವಾದ ಪ್ರೊಫೈಲಿಂಗ್ ಆಗುತ್ತೆ ಅಂತ ಎಲ್ಲವನ್ನೂ ಅಳಿಸಿಹಾಕಿದೆ. ನನಗೆ ಅದು